# **ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978**

ಪ್ರಕರಣಗಳ ಅನುಕ್ರಮಣಿಕೆ

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**ಪ್ರಕರಣಗಳು :**


1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು
3. ನೇಮಕಾತಿಯ ಮತ್ತು ಸೇವಾ ಷರತ್ತುಗಳ ವಿನಿಯಮನ
4. ನೇಮಕಗಳಲ್ಲಿ ಮತ್ತು ಹುದ್ದೆಗಳಲ್ಲಿ ಮೀಸಲಾತಿ
5. ಶಿಸ್ತು ವ್ಯವಹರಣೆಗಳಿಗೆ ಸಂಬಂಧಿಸಿದ ಉಪಬಂಧಗಳು
6. ಇತರ ಕಾನೂನಿಗಳಿಗಿಂತ ಈ ಅಧಿನಿಯಮವೇ ಹೆಚ್ಚು ಪರಿಣಾಮಕಾರಿಯಾಗಿರುವುದು
7. ಕರ್ನಾಟಕ ಅಧಿನಿಯಮಗಳ 1964ರ 4, 1964ರ 22, 1966ರ 27, ಮತ್ತು 1977ರ 14 ತಿದ್ದುಪಡಿ
8. ನಿಯಮಗಳ ರಚನಾಧಿಕಾರ
9. ನಿರಸನ

ಅನುಸೂಚಿ


* * * *

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

I

**1990ರ ಅಧಿನಿಯಮ 14.-** ಭಾರತ ಸಂವಿಧಾನದ 309, 187 (2), ಮತ್ತು 229 (2) ಅನುಚ್ಛೇದಗಳು ಸಿವಿಲ್ ನೌಕರರ ನೇಮಕಾತಿ ಮತ್ತು ಸೇವಾ ಷರತ್ತುಗಳನ್ನು ರಾಜ್ಯ ವಿಧಾನ ಮಂಡಲದ ಕಾನೂನಿನ ಮೂಲಕ ನಿಯಂತ್ರಿಸುವುದನ್ನು ಉಪಬಂಧಿಸುತ್ತವೆ. ಆದ್ದರಿಂದ ಈ ಉದ್ದೇಶಕ್ಕಾಗಿ ಕಾನೂನು ಮಾಡುವುದು ಅಪೇಕ್ಷಣೀಯವೆಂದು ಪರಿಗಣಿಸಲಾಗಿದೆ.

ಅಧಿನಿಯಮದ ಅಡಿಯಲ್ಲಿ ಮೊದಲಾದ ನೇಮಕಾತಿ ಮತ್ತು ಸೇವಾ ಷರತ್ತುಗಳನ್ನು ನಿಯಂತ್ರಿಸುವ ನಿಯಮಗಳು ಸಿವಿಲ್ ನೌಕರರು, ಕರ್ನಾಟಕ ರಾಜ್ಯ ವಿಧಾನ ಮಂಡಲದ ಸಚಿವಾಲಯ ಸಿಬ್ಬಂದಿ ಮತ್ತು ಉಚ್ಚ ನ್ಯಾಯಾಲಯ ಸ್ಥಾಪನೆಯ ಸದಸ್ಯರುಗಳ ಸೇವಾ ಷರತ್ತುಗಳಿಗೆ ಸಂಬಂಧಿಸಿರುವುದರಿಂದ, ನಿಯಮಗಳ ಪೂರ್ವ ಪ್ರಕಟಣೆಗಾಗಿ ಮತ್ತು ನಿಯಮಗಳನ್ನು ರಚಿಸುವ ಮೊದಲು ವಿಧಾನ ಮಂಡಲದ ಹಾಗೂ ಉಚ್ಚ ನ್ಯಾಯಾಲಯದ ಪ್ರಿಸೈಡಿಂಗ್ ಅಧಿಕಾರಿಗಳ ದೃಷ್ಟಿಕೋನವನ್ನು ತಿಳಿದುಕೊಳ್ಳುವುದಕ್ಕಾಗಿ 3(2)ನೇ ಖಂಡದಲ್ಲಿ ಉಪಬಂಧ ಕಲ್ಪಿಸಲಾಗಿದೆ.

ಈ ಅಧಿನಿಯಮದ ಪ್ರಾರಂಭಕ್ಕೆ ಮೊದಲು ಮಾಡಲಾದ ನಿಯಮಗಳ ಮುಂದುವರಿಕೆಗಾಗಿ ಖಂಡ 3ರಲ್ಲಿ ಉಪಬಂಧ ಕಲ್ಪಿಸಲಾಗಿದೆ. ಸಿವಿಲ್ ನೌಕರರ ನಡತೆಯನ್ನು ವಿಚಾರಣೆ ನಡೆಸಲು ಅಗತ್ಯಪಡಿಸಬಹುದಾದ ಜಾಗೃತದಳದ ಕಮೀಷನರು, ಜಾಗೃತ ದಳ ಆಯೋಗದ ಅಧಿಕಾರಿಗಳು ಮತ್ತು ಇತರೆ ಅಧಿಕಾರಗಳ ವಿಚಾರಣೆಯನ್ನು ಕ್ರಮಬದ್ಧವಾಗಿ ನಡೆಸಲು, ಸಮರ್ಥಗೊಳಿಸಲು ಅವಶ್ಯಕ ಅಧಿಕಾರಗಳನ್ನು ನೀಡಬೇಕಾಗುತ್ತದೆ. ಈ ಉದ್ದೇಶಕ್ಕಾಗಿ, ಅಂಥ ಅಧಿಕಾರಿಗಳಿಗೆ ಸಿವಿಲ್ ಪ್ರಕ್ರಿಯೆ ಸಂಹಿತೆ, 1908ರ ಅಡಿಯಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ದಾವೆಯನ್ನು ನಡೆಸುವಾಗ ಕೆಲವು ಅಧಿಕಾರಗಳೊಂದಿಗೆ ಅಧಿಕಾರಗಳನ್ನು ನೀಡಲು ಪ್ರಸ್ತಾಪಿಸಲಾಗಿದೆ. ತೃಪ್ತಿಕರವಾಗಿ ಲೆಕ್ಕ ಕೊಡದಿರುವ ಆದಾಯದ ತಿಳಿದ ಮೂಲಗಳ ಅನುಪಾತದ ತಮ್ಮ ಆಸ್ತಿಗಳ ಸ್ವಾದೀನ ಹೊಂದಿರುವ ಭ್ರಷ್ಟ ಸಿವಿಲ್ ನೌಕರರೊಂದಿಗೆ ವ್ಯವಹರಿಸುವ ಸಂಬಂಧದಲ್ಲಿ ಅನುಪಾತದ ಆಸ್ತಿಗಳ ಸ್ವಾದೀನ ಹೊಂದಿರುವ ಸಿವಿಲ್ ನೌಕರನ ದುರ್ನಡತೆ ಸಾಬೀತಾದಾಗ ದುರ್ನಡತೆಯನ್ನು ಪೂರ್ವಭಾವಿಸುವುದಕ್ಕಾಗಿ ಉಪಬಂಧಗಳು ಅವಶ್ಯಕವೆಂದು ಪರಿಗಣಿಸಲಾಗಿದೆ. ವಿಧೇಯಕದ 5ನೇ ಖಂಡದಲ್ಲಿ ಸದರಿ ವಿಷಯಗಳ ಉಪಬಂಧಗಳನ್ನು ಕಲ್ಪಿಸಲಾಗಿದೆ.

(ಕರ್ನಾಟಕ ರಾಜ್ಯಪತ್ರ (ವಿಶೇಷ) ಭಾಗ IV-2ಎ ದಿನಾಂಕ 10.08.1978 ಪುಟ 10 ಸಂಖ್ಯೆ 1135ರಲ್ಲಿ ಪ್ರಕಟಿಸಲಾಗಿದೆ

II

**1991ರ ತಿದ್ದುಪಡಿ ಅಧಿನಿಯಮ 37**.- ವಿಧಾನ ಮಂಡಲ ಮತ್ತು ಉಚ್ಚ ನ್ಯಾಯಾಲಯದ ಸ್ವತಂತ್ರ ಸ್ಥಾನಮಾನವನ್ನು ದೃಷ್ಟಿಯಲ್ಲಿ ಇರಿಸಿಕೊಂಡು ಮತ್ತು ಉಚ್ಚನ್ಯಾಯಾಲಯವು ಅದರ

ಸಿಬ್ಬಂದಿಯನ್ನು ನಿಯಂತ್ರಿಸಲು ಅಂತೆಯೇ ಸದರಿ ಸೇವೆಗಳಲ್ಲಿ ಕಡ್ಡಾಯ ಮೀಸಲಾತಿಯನ್ನು ಜಾರಿಗೊಳಿಸಲು ಸೂಕ್ತವಾದ ಅಧಿಕಾರವನ್ನು ಪ್ರದಾನ ಮಾಡಲು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ 1978 (1990ರ ಕರ್ನಾಟಕ ಅಧಿನಿಯಮ 14)ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಕೆಲವು ಪಾಸಂಗಿಕ ತಿದ್ದುಪಡಿಗಳನ್ನು ಮಾಡಲು ಸಹ ಈ ಅವಕಾಶವನ್ನು ಉಪಯೋಗಿಸಿಕೊಳ್ಳಲಾಗಿದೆ

ಆದ್ದರಿಂದ ಈ ವಿಧೇಯಕ

( ಕರ್ನಾಟಕ ವಿಶೇಷ ರಾಜ್ಯ ಪತ್ರದ ಭಾಗ IV -2ಎ ಸಂ. 6212ರ ದಿನಾಂಕ 30.09.1991ರಲ್ಲಿ ಪ್ರಕಟಿಸಲಾಗಿದೆ)

III

**2003ರ ತಿದ್ದುಪಡಿ ಅಧಿನಿಯಮ 17**. – ನಿಯಮಗಳನ್ನು ರಚಿಸುವ ಪ್ರಕ್ರಿಯೆಯನ್ನು ಶೀಘ್ರವಾಗಿ ಮುಕ್ತಾಯಗೊಳಿಸುವುದಕ್ಕೆ ಸಮರ್ಥಗೊಳಿಸಲು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978ರ 3ನೇ ಪ್ರಕರಣದಲ್ಲಿನ (2)ನೇ ಉಪ-ಪ್ರಕರಣದ (ಎ) ಖಂಡದಲ್ಲಿ ನಿರ್ದಿಷ್ಟಪಡಿಸಲಾಗಿದ್ದ 30 ದಿನಗಳ ಅವಧಿಯನ್ನು 15 ದಿನಗಳ ಅವಧಿಗೆ ಇಳಿಸುವುದು ಅವಶ್ಯಕವೆಂದ ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2003ರ ವಿಧಾನ ಸಭೆ ವಿಧೇಯಕ ಸಂಖ್ಯೆ 31]

[ಭಾರತ ಸಂವಿಧಾನದ ಏಳನೆ ಅನುಸೂಚಿಯ IIನೇ ಪಟ್ಟಿಯ 41ನೇ ನಮೂದು]

IV

**2010ರ ತಿದ್ದುಪಡಿ ವಿಧೇಯಕ 20.-** ಸೃಜಿಸಿದ ಹುದ್ದೆಗಳ ಸಂಖ್ಯೆ ಮತ್ತು ಸ್ವರೂಪವನ್ನು ಮಾತ್ರ ನಿರ್ದಿಷ್ಟಪಡಿಸಿ ನಿಯಮಗಳ ಪೂರ್ವ ಪ್ರಕಟಣೆ ಮಾಡಬೇಕಾದ ಅಗತ್ಯತೆಯನ್ನು ಬಿಟ್ಟುಬಿಡಲು ಹಾಗೂ 5ನೇ ಪ್ರಕರಣದ (3)ನೇ ಉಪ ಪ್ರಕರಣದ ಅಡಿಯಲ್ಲಿಯ ವಿವರಣೆಯಲ್ಲಿರುವ ಭ್ರಷ್ಟಾಚರ ಪ್ರತಿಬಂಧಕ ಅಧಿನಿಯಮ, 1947ನ್ನು ಕುರಿತ ಉಲ್ಲೇಖಕ್ಕೆ ಬದಲಾಗಿ ಹಳೆಯ ಅಧಿನಿಯಮವನ್ನು ನಿರಸನಗೊಳಿಸಿದ ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮ, 1988ರ ( 1988ರ ಕೇಂದ್ರ ಅಧಿನಿಯಮ 49) ಉಲ್ಲೇಖವನ್ನು ಹಾಕಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978ನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ

[2009ರ ವಿಧಾನ ಸಭೆ ವಿಧೇಯಕ 2; ಕಡತ ಸಂ. ಸಂವ್ಯಶಾಇ 16 ಶಾಸನ 2008]

[ಭಾರತ ಸಂವಿಧಾನದ ಏಳನೇ ಅನುಸೂಚಿಯ IIನೇ ಪಟ್ಟಿಯ 41ನೇ ನಮೂದು]

**2021ರ ತಿದ್ದುಪಡಿ ಅಧಿನಿಯಮ 33**.- ಮುಖ್ಯ ಮಂತ್ರಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆಯ ಉಸ್ತುವಾರಿಯಲ್ಲಿರುವ ಮಂತ್ರಿ, ಹಣಕಾಸು ಉಸ್ತುವಾರಿಯಲ್ಲಿರುವ ಮಂತ್ರಿ, ಕರ್ನಾಟಕ ವಿಧಾನ ಪರಿಷತ್ತಿನ ಸಂದರ್ಭದಲ್ಲಿ ಸಭಾಪತಿ ಹಾಗೂ ಸಂದರ್ಭಾನುಸಾರವಾಗಿ ಕರ್ನಾಟಕ ವಿಧಾನ ಸಭೆಯ ಸಂದರ್ಭದಲ್ಲಿ ಸಭಾಧ್ಯಕ್ಷ ಇವರನ್ನು ಒಳಗೊಂಡ ಪ್ರತ್ಯೇಕ ವಿಶೇಷ ಮಂಡಳಿಯನ್ನು ರಚಿಸುವ ಸಲುವಾಗಿ "ವಿಶೇಷ ಮಂಡಳಿ" ಎಂಬ ಪದಗಳನ್ನು ಮರು ಪರಿಭಾಷಿಸಲು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978ನ್ನು (1990ರ ಕರ್ನಾಟಕ ಅಧಿನಿಯಮ 14) ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ

[2020ರ ವಿಧಾನ ಸಭೆ ವಿಧೇಯಕ ಸಂ. 61, ಕಡತ ಸಂಖ್ಯೆ: ಸಂವ್ಯಶಾಇ 72 ಶಾಸನ 2020]

[ಭಾರತ ಸಂವಿಧಾನದ ಏಳನೇ ಅನುಸೂಚಿಯ IIನೇ ಪಟ್ಟಿಯ 41ನೇ ನಮೂದು]

[ಕರ್ನಾಟಕ ರಾಜ್ಯಪತ್ರದ ಭಾಗ –IVಎ, ವಿಶೇಷ ಪತ್ರಿಕೆ ಸಂಖ್ಯೆ: 822 ದಿನಾಂಕ: 07-10-2021ರಲ್ಲಿ ಪ್ರಕಟಿಸಲಾಗಿದೆ]

## 1990ರ ಕರ್ನಾಟಕ ಅಧಿನಿಯಮ ಸಂಖ್ಯೆ 14

(1990ರ ಮೇ ಮೂವತ್ತನೇ ದಿವಸದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿಸಲಾಯಿತು)

## ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978

(1985 ನೇ ಜುಲೈ ಹನ್ನೆರಡನೇ ದಿವಸದಂದು ರಾಷ್ಟ್ರಪತಿಗಳ ಒಪ್ಪಿಗೆ ಪಡೆದಿದೆ)
(1991ರ ಅಧಿನಿಯಮ ಸಂಖ್ಯೆ 37ರ 2003ರ 17, 2020ರ 20 ಮತ್ತು 2021ರ 33ರಲ್ಲಿ ತಿದ್ದುಪಡಿಯಾದಂತೆ)

**ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳಿಗೆ ಮತ್ತು ಕರ್ನಾಟಕ ರಾಜ್ಯ ವ್ಯವಹಾರಗಳಿಗೆ ಸಂಬಂಧಿಸಿದ ಹುದ್ದೆಗಳಿಗೆ ನೇಮಕಗೊಂಡ ವ್ಯಕ್ತಿಗಳ ನೇಮಕಾತಿಯನ್ನು ಮತ್ತು ಸೇವಾ ಷರತ್ತುಗಳನ್ನು ವಿನಿಯಮಿಸುವ ಒಂದು ಅಧಿನಿಯಮ.**

ಭಾರತ ಸಂವಿಧಾನದ 187 ನೇ ಅನುಚ್ಛೇದದ (2)ನೆಯ ಖಂಡದ, 229 ನೇ ಅನುಚ್ಛೇದದ (2)ನೆಯ ಖಂಡದ ಮತ್ತು 309ನೇ ಅನುಚ್ಛೇದದ ಮೇರೆಗೆ ಮತ್ತು ಭಾರತ ಸಂವಿಧಾನದ ಏಳನೇ ಅನುಸೂಚಿಯ ಪಟ್ಟಿ-II ರ ರ 3 ಮತ್ತು 41ರ ನಮೂದುಗಳ ಮೇರೆಗೆ, ರಾಜ್ಯವಿಧಾನ ಮಂಡಲವು ಸಾರ್ವಜನಿಕ ಸೇವೆಗಳಿಗೆ ಮತ್ತು ಕರ್ನಾಟಕ ರಾಜ್ಯದ ವ್ಯವಹಾರಗಳಿಗೆ ಸಂಬಂಧಿಸಿದ ಹುದ್ದೆಗಳಿಗೆ ನೇಮಕಗೊಂಡ ವ್ಯಕ್ತಿಗಳ ಮತ್ತು ಕರ್ನಾಟಕ ರಾಜ್ಯ ವಿಧಾನ ಮಂಡಲದ ಸದನಗಳ ಸಚಿವಾಲಯ ಸಿಬ್ಬಂದಿ ನೇಮಕಾತಿಯನ್ನು ಮತ್ತು ಸೇವಾ ಷರತ್ತುಗಳನ್ನು ಮತ್ತು ಕರ್ನಾಟಕ ಉಚ್ಚನ್ಯಾಯಾಲಯದ ಅಧಿಕಾರಿಗಳು ಮತ್ತು ನೌಕರರ ಸೇವಾ ಷರತ್ತುಗಳನ್ನು ಕಾನೂನು ಮೂಲಕ ವಿನಿಯಮಿಸಬಹುದಾದ್ದರಿಂದ;

ಮತ್ತು ಮೇಲೆ ಹೇಳಲಾದ ಸಂಬಂಧದಲ್ಲಿ ಮತ್ತು ಇದರಲ್ಲಿ ಇನ್ನು ಮುಂದೆ ಕಂಡುಬರುವ ಇತರ ವಿಷಯಗಳ ಸಂಬಂಧದಲ್ಲಿ ಕಾನೂನನ್ನು ರಚಿಸುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಇಪ್ಪತ್ತೊಂಬತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು.

[1] **[1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ**.- ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978ಎಂದು ಕರೆಯತಕ್ಕದ್ದು.

1. 1991ರ ಅಧಿನಿಯಮ ಸಂಖ್ಯೆ 37ರ ಮೂಲಕ 30.5.1990ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. [1][ಇದು ರಾಜ್ಯ ಸರ್ಕಾರವು ಅಧಿಸೂಚನೆ ಮೂಲಕ ಗೊತ್ತುಪಡಿಸಬಹುದಾದಂಥ [ದಿನಾಂಕ][1] ದಿಂದ ಜಾರಿಗೆ ಬರತಕ್ಕದ್ದು.][1]

1. ಅಧಿನಿಯಮವು 2.4.1992ರಿಂದ ಜಾರಿಗೆ ಬಂದಿದೆ.

**2. ಪರಿಭಾಷೆಗಳು**.- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

[1[](1) ``ಮಂಡಲಿ'' ಎಂದರೆ ವಿಧಾನ ಪರಿಷತ್ತಿನ ಸಭಾಪತಿಯವರನ್ನು ಮತ್ತು ವಿಧಾನಸಭೆಯ ಸಭಾಧ್ಯಕ್ಷರನ್ನು ಒಳಗೊಂಡಿರುವ ಒಂದು ಮಂಡಲಿ;][1]

1. 1991ರ ಅಧಿನಿಯಮ 37ರ ಮೂಲಕ 10.12.1991 ರಂದು ಜಾರಿಗೆ ಬರುವಂತೆ ಸೇರಿಸಲಾಗಿದೆ. .

[1][(1ಎ)][1] ``ಉಚ್ಚನ್ಯಾಯಾಲಯ'' ಎಂದರೆ ಕರ್ನಾಟಕದ ಉಚ್ಚನ್ಯಾಯಾಲಯ;

1. 1991ರ ಅಧಿನಿಯಮ ಸಂಖ್ಯೆ 37ರ ಮೂಲಕ 10.12.1990ರಿಂದ ಜಾರಿಗೆ ಬರುವಂತೆ ಮರು ಸಂಖ್ಯೆ ನೀಡಲಾಗಿದೆ.

(2) ``ವಿಧಾನ ಮಂಡಲ'' ಎಂದರೆ ಕರ್ನಾಟಕ ರಾಜ್ಯ ವಿಧಾನ ಮಂಡಲ;

(3) ``ಸಾರ್ವಜನಿಕ ಸೇವೆ'' ಎಂದರೆ ರಾಜ್ಯದ ಸಿವಿಲ್ ಸೇವೆಗಳು ಮತ್ತು ಇದು ರಾಜ್ಯದ ಅಧೀನದಲ್ಲಿರುವ ಸಿವಿಲ್ ಹುದ್ದೆ, ವಿಧಾನ ಮಂಡಲದ ಉಭಯ ಸದನಗಳ ಸಚಿವಾಲಯ ಸಿಬ್ಬಂದಿ ಮತ್ತು ಉಚ್ಚನ್ಯಾಯಾಲಯದ ಅಧಿಕಾರಿಗಳು ಮತ್ತು ನೌಕರರನ್ನು ಒಳಗೊಳ್ಳುತ್ತದೆ;

(4)``ನಿಯಮಗಳು'' ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಲಾದ ಅಥವಾ ರಚಿಸಲಾಗಿದೆ ಎಂದು ಭಾವಿಸಲಾದ ನಿಯಮಗಳು;

[1][(4ಎ) ``ವಿಶೇಷ ಮಂಡಲಿ'' ಎಂದರೆ ಮುಖ್ಯಮಂತ್ರಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನಾ ರಚನೆಯ ಉಸ್ತುವಾರಿಯಲ್ಲಿರುವ ಮಂತ್ರಿ, ಹಣಕಾಸು ಉಸ್ತುವಾರಿಯಲ್ಲಿರುವ ಮಂತ್ರಿ, ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ, ಹಾಗೂ ಸಂದರ್ಭಾನುಸಾರವಾರ ಕರ್ನಾಟಕ ವಿಧಾನಸಭೆಯ ಸಂದರ್ಭದಲ್ಲಿ ಇವರನ್ನು ಒಳಗೊಂಡಿರುವ ಒಂದು ಮಂಡಲಿ;][1]

1.2021ರ ಅಧಿನಿಯಮ 33ರ ಮೂಲಕ 7.10.2021ರಂದು ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(5) ``ರಾಜ್ಯ'' ಎಂದರೆ ಕರ್ನಾಟಕ ರಾಜ್ಯ.

**3. ನೇಮಕಾತಿಯ ಮತ್ತು ಸೇವಾ ಷರತ್ತುಗಳ ವಿನಿಯಮನ.-** (1) ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು ರಾಜ್ಯ ಸರ್ಕಾರವು ಅಧಿಸೂಚನೆ ಮೂಲಕ ಈ ಕೆಳಕಂಡ ವಿಷಯಗಳಿಗೆ ನಿಯಮಗಳನ್ನು ರಚಿಸಬಹುದು, ಎಂದರೆ,-

(ಎ) ರಾಜ್ಯದ ಸಾರ್ವಜನಿಕ ಸೇವೆಗಳ ವಿವಿಧ ವಿಭಾಗಗಳಲ್ಲಿನ ಹುದ್ದೆಗಳ ವಿವಿಧ ಪ್ರವರ್ಗಗಳನ್ನು ಅಂಥ ಪ್ರತಿಯೊಂದು ಪ್ರವರ್ಗದಲ್ಲಿ ಇರುವ ಹುದ್ದೆಗಳ ಒಟ್ಟು ಸಂಖ್ಯೆಯನ್ನು ಮತ್ತು ಸ್ವರೂಪವನ್ನು ಮತ್ತು ಅಂಥ ಪ್ರತಿಯೊಂದು ಪ್ರವರ್ಗಕ್ಕೆ ಅಂಗೀಕಾರಾರ್ಹವಾದ ವೇತನ ಶ್ರೇಣಿಯನ್ನು ನಿರ್ದಿಷ್ಟಪಡಿಸುವುದು;

(ಬಿ) ಸಾರ್ವಜನಿಕ ಸೇವೆಗಳಿಗೆ ನೇಮಕಗೊಂಡ ವ್ಯಕ್ತಿಗಳ ನೇಮಕಾತಿಯನ್ನು ಮತ್ತು ಸೇವಾ ಷರತ್ತುಗಳನ್ನು ವಿನಿಯಮಿಸುವುದು:

[1][ಪರಂತು, ಉಚ್ಚನ್ಯಾಯಾಲಯದ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಸಂಬಂಧಪಟ್ಟಂತೆ, ಈ ಉಪ-ಪ್ರಕರಣದ ಮೇರೆಗಿನ ರಾಜ್ಯ ಸರ್ಕಾರದ ಅಧಿಕಾರಗಳನ್ನು ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಚಲಾಯಿಸತಕ್ಕದ್ದು:

ಮತ್ತೂ ಪರಂತು, ವಿಧಾನ ಮಂಡಲದ ಉಭಯ ಸದನಗಳ ಸಚಿವಾಲಯದ ಸಿಬ್ಬಂದಿಗೆ ಸಂಬಂಧಪಟ್ಟಂತೆ, ಈ ಉಪಪ್ರಕರಣದ ಮೇರೆಗಿನ ರಾಜ್ಯಸರ್ಕಾರದ ಅಧಿಕಾರಗಳನ್ನು ವಿಶೇಷ ಮಂಡಲಿಯು ಚಲಾಯಿಸತಕ್ಕದ್ದು.][1]

1. 1991ರ ಅಧಿನಿಯಮ ಸಂಖ್ಯೆ 37ರ ಮೂಲಕ 10.12.1991ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(2) (1)ನೇ ಉಪ-ಪ್ರಕರಣದಿಂದ ಪ್ರದತ್ತವಾದ ನಿಯಮ ರಚನಾಧಿಕಾರವು ಈ ಮುಂದಿನ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು, ಎಂದರೆ.-

(ಎ) ನಿಯಮಗಳನ್ನು [2][ಹದಿನೈದು ದಿವಸ][2] ಗಳಿಗಿಂತ ಕಡಿಮೆ ಇಲ್ಲದ ಅವಧಿಗೆ ಮುಂಚೆ ಪ್ರಕಟಿಸಿದ ನಂತರ ರಚಿಸತಕ್ಕದ್ದು;

(ಬಿ) ಪ್ರಸ್ತಾವಿತ ನಿಯಮಗಳು, ಸಿವಿಲ್ ಸೇವೆಗಳಿಗೆ ಅಥವಾ ಯಾವ ಸಿವಿಲ್ ಹುದ್ದೆಗಳಿಗೆ ಸಂಬಂಧಪಟ್ಟಂತೆ ಭಾರತ ಸಂವಿಧಾನದ 320 ನೇ ಅನುಚ್ಛೇದದ (3) ನೇ ಖಂಡದ ಮೇರೆಗೆ ಕರ್ನಾಟಕ ಲೋಕಸೇವಾ ಆಯೋಗದೊಡನೆ ಸಮಾಲೋಚಿಸಬೇಕಾಗಿದೆಯೋ ಆ ಸಿವಿಲ್ ಹುದ್ದೆಗಳ ನೇಮಕಾತಿ ವಿಧಾನಗಳಿಗೆ ಸಂಬಂಧಪಟ್ಟಿದ್ದರೆ ಮತ್ತು ಭಾರತ ಸಂವಿಧಾನದ 229ನೇ ಅನುಚ್ಛೇದದ (1)ನೇ ಖಂಡದ ಪರಂತುಕದ ಮೇರೆಗಿನ ಉಚ್ಚ ನ್ಯಾಯಾಲಯದ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಸಂಬಂಧಪಟ್ಟಿದ್ದರೆ, (ಎ) ಖಂಡದ ಮೇರೆಗೆ ಪ್ರಕಟಿಸಲಾದಂತಹ ಕರಡು ನಿಯಮಗಳ ಒಂದು ಪ್ರತಿಯನ್ನು ಕರ್ನಾಟಕ ಲೋಕ ಸೇವಾ ಆಯೋಗದ ಕಾರ್ಯದರ್ಶಿಗೆ, ಸದರಿ ಖಂಡದ ಮೇರೆಗೆ ನಿರ್ದಿಷ್ಟಪಡಿಸಿದ ಅವಧಿಯೊಳಗಾಗಿ ಪ್ರಸ್ತಾವಿತ ನಿಯಮಗಳ ಬಗ್ಗೆ ಆಯೋಗದ ಅಭಿಪ್ರಾಯವನ್ನು ತಿಳಿಸಲು ಕಳುಹಿಸತಕ್ಕದ್ದು;

(ಸಿ) ರಾಜ್ಯ ಸರ್ಕಾರವು ಅಥವಾ ಐಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಅಥವಾ ವಿಶೇಷ ಮಂಡಳಿಯು, ಕರ್ನಾಟಕ ಲೋಕ ಸೇವಾ ಆಯೋಗದ ಅಭಿಪ್ರಾಯವನ್ನು ಮತ್ತು ಸದರಿ ನಿಯಮಗಳಿಂದ ಬಾಧಿತನಾಗುವ ಸಂಭವವಿರುವ ಯಾರೇ ವ್ಯಕ್ತಿಗಳಿಂದ (ಎ) ಖಂಡದ ಮೇರೆಗೆ ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾಗುವುದಕ್ಕೂ ಮೊದಲು ಸ್ವೀಕರಿಸಲಾದ ಯಾವುದೇ ಆಕ್ಷೇಪಣೆಯನ್ನು ಅಥವಾ ಸಲಹೆಯನ್ನು ಪರಿಗಣಿಸತಕ್ಕದ್ದು ಮತ್ತು ತಾನು ಯುಕ್ತವೆಂದು ಭಾವಿಸುವಂತಹ ಮಾರ್ಪಾಟುಗಳೊಂದಿಗೆ ನಿಯಮಗಳನ್ನು ರಚಿಸತಕ್ಕದ್ದು:

ಪರಂತು, ಈ ಉಪ ಪ್ರಕರಣದಲ್ಲಿ ಇರುವುದು ಯಾವುದೂ, ಸಾರ್ವಜನಿಕ ಸೇವೆಗೆ ನೇಮಕಗೊಂಡ ವ್ಯಕ್ತಿಗಳ ವೇತನ ಮತ್ತು ಇತರ ಉಪಲಬ್ಧಿಗಳನ್ನು ನಿಯಂತ್ರಿಸುವ ನಿಯಮಗಳಿಗೆ ಅನ್ವಯವಾಗತಕ್ಕದ್ದಲ್ಲ.][1]

1. 1991ರ ಅಧಿನಿಯಮ ಸಂಖ್ಯೆ 37ರ ಮೂಲಕ 2.4.1992ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2003ರ ಅಧಿನಿಯಮ 17ರ ಮೂಲಕ 8.4.2003ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][ಮತ್ತು ಪರಂತು, (ಎ) ಖಂಡದಲ್ಲಿರುವುದಾವುದು ಹುದ್ದೆಗಳ ಸಂಖ್ಯೆ ಮತ್ತು ಸ್ವರೂಪವನ್ನು ನಿರ್ದಿಷ್ಟಪಡಿಸುವ ನಿಯಮಗಳಿಗೆ ಅನ್ವಯಿಸತಕ್ಕದ್ದಲ್ಲ.][1]

1. 2010ರ ಅಧಿನಿಯಮದ 20ರ ಮೂಲಕ 06.05.2010ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(3) (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ವಿಷಯಗಳಿಗೆ ಸಂಬಂಧಿಸಿದ ಮತ್ತು ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಜಾರಿಯಲ್ಲಿದ್ದ,-

(i) ರಾಜ್ಯಪಾಲರು, ಭಾರತ ಸಂವಿಧಾನದ ೧೮೭ನೇ ಅನುಚ್ಛೇದದ (3)ನೇ ಖಂಡದ ಮೇರೆಗೆ, ವಿಧಾನ ಮಂಡಲದ ಸದನಗಳ ಸಚಿವಾಲಯ ಸಿಬ್ಬಂದಿಯಾಗಿ ನೇಮಕಗೊಂಡ ವ್ಯಕ್ತಿಗಳ ನೇಮಕಾತಿಯನ್ನು ಮತ್ತು ಸೇವಾ ಷರತ್ತುಗಳನ್ನು ವಿನಿಯಮನಗೊಳಿಸಲು ರಚಿಸಿದ ಎಲ್ಲಾ ನಿಯಮಗಳನ್ನು;

(ii) ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಅಥವಾ ಮುಖ್ಯ ನ್ಯಾಯಾಧೀಶರಿಂದ ಅಧಿಕೃತರಾದ ಕರ್ನಾಟಕ ಉಚ್ಚ ನ್ಯಾಯಾಲಯದ ಬೇರೆ ಯಾರಾದರೂ ನ್ಯಾಯಾಧೀಶರು ಅಥವಾ ಅಧಿಕಾರಿಯು, ಭಾರತ ಸಂವಿಧಾನದ 229ನೇ ಅನುಚ್ಛೇದದ (2)ನೇ ಖಂಡದ ಮೇರೆಗೆ ಕರ್ನಾಟಕ ಉಚ್ಚ ನ್ಯಾಯಾಲಯದ ಅಧಿಕಾರಿಗಳ ಮತ್ತು ನೌಕರರ ಸೇವಾ ಷರತ್ತುಗಳನ್ನು ವಿನಿಯಮನಗೊಳಿಸಲು ರಚಿಸಿದ ಎಲ್ಲಾ ನಿಯಮಗಳನ್ನು; ಮತ್ತು

(iii) ರಾಜ್ಯಪಾಲರು, ಭಾರತ ಸಂವಿಧಾನದ 309ನೇ ಅನುಚ್ಛೇದದ ಪರಂತುಕದ ಮೇರೆಗೆ ರಾಜ್ಯದ ವ್ಯವಹಾರಗಳಿಗೆ ಸಂಬಂಧಿಸಿದ ಸಿವಿಲ್ ಸೇವೆಗಳಿಗೆ ಮತ್ತು ಹುದ್ದೆಗಳಿಗೆ ನೇಮಕಗೊಂಡ ವ್ಯಕ್ತಿಗಳ ನೇಮಕಾತಿಯನ್ನು ಮತ್ತು ಸೇವಾ ಷರತ್ತುಗಳನ್ನು ವಿನಿಯಮನಗೊಳಿಸಲು ರಚಿಸಿದ ಎಲ್ಲಾ ನಿಯಮಗಳನ್ನು;

(iv) ಸರ್ಕಾರವು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ರಚಿಸಿದ ಎಲ್ಲಾ ನಿಯಮಗಳನ್ನು

-(1)ನೇ ಉಪ-ಪ್ರಕರಣದ ಮೇರೆಗೆ ರಚಿಸಿದ ನಿಯಮಗಳೆಂದು ಭಾವಿಸತಕ್ಕದ್ದು ಮತ್ತು ಅವು ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳಿಂದ ಮಾರ್ಪಾಟು ಅಥವಾ ಬದಲಾವಣೆ ಆಗುವವರೆಗೆ ಮುಂದುವರೆಯತಕ್ಕದ್ದು.

**4. ನೇಮಕಾತಿಗಳಲ್ಲಿ ಮತ್ತು ಹುದ್ದೆಗಳಲ್ಲಿ ಮೀಸಲಾತಿ**.- ಸರ್ಕಾರಿ ಸೇವೆಗೆ ನೇಮಕಾತಿ ಮಾಡುವ ಎಲ್ಲ ಪ್ರಕರಣಗಳಲ್ಲೂ, ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸೇರಿದ ನಾಗರಿಕರಿಗಾಗಿ, ರಾಜ್ಯಸರ್ಕಾರವು, ಕಾಲ ಕಾಲಕ್ಕೆ ನಿರ್ಧರಿಸಬಹುದಾದಂಥ ವ್ಯಾಪ್ತಿಯವರೆಗೆ ಮತ್ತು ರೀತಿಯಲ್ಲಿ ನೇಮಕಾತಿಯಲ್ಲಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ ಇರತಕ್ಕದ್ದು.

**5. ಶಿಸ್ತು ವ್ಯವಹರಣೆಗಳಿಗೆ ಸಂಬಂಧಿಸಿದ ಉಪಬಂಧಗಳು**.- (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಯಾವುದೇ ಪ್ರಾಧಿಕಾರಕ್ಕೆ ಅಥವಾ ಯಾವುದೇ ಕಾನೂನಿನಿಂದ ಅಥವಾ ಈ ಅಧಿನಿಯಮದ ಮೇರೆಗೆ ರಚಿಸಲಾದ ಅಥವಾ ರಚಿಸಲಾಗಿದೆ ಎಂದು ಭಾವಿಸಲಾದ ಯಾವುವೇ ನಿಯಮಗಳ ಮೂಲಕ ಅಧಿಕೃತಗೊಂಡ ಯಾರೇ ಅಧಿಕಾರಿಗೆ, ಸಾರ್ವಜನಿಕ ಸೇವೆಯ ಯಾರೇ ಸದಸ್ಯನ

ವರ್ತನೆಯ ಬಗ್ಗೆ ವಿಚಾರಣೆ ನಡೆಸಲು, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ ಕೇಂದ್ರಾಧಿನಿಯಮ 5)ರ ಮೇರೆಗೆ ದಾವೆಯ ವಿಚಾರಣೆ ನಡೆಸುತ್ತಿರುವಾಗ ಸಿವಿಲ್ ನ್ಯಾಯಾಲಯಕ್ಕೆ ಇರುವ ಅಧಿಕಾರಗಳನ್ನೇ ಈ ಮುಂದಿನ ವಿಷಯಗಳನ್ನು ಕುರಿತಂತೆ ವಹಿಸಿಕೊಡಬಹುದು, ಎಂದರೆ:-

(ಎ) ಯಾರೇ ವ್ಯಕ್ತಿಯ ಹಾಜರಾತಿಯನ್ನು ಸಮನ್ ಮಾಡುವುದು ಮತ್ತು ಹಾಜರಾತಿಯನ್ನು ಒತ್ತಾಯಿಸುವುದು ಮತ್ತು ಪ್ರಮಾಣವಚನದ ಮೇಲೆ ಅವನನ್ನು ಪರೀಕ್ಷಿಸುವುದು;

(ಬಿ) ಯಾವುದೇ ದಸ್ತಾವೇಜನ್ನು ಪತ್ತೆ ಹಚ್ಚಲು ಮತ್ತು ಹಾಜರುಪಡಿಸಲು ಅಗತ್ಯಪಡಿಸುವುದು;

(ಸಿ) ಅಫಿಡಾವಿಟ್‌ನ ಮೇಲೆ ಸಾಕ್ಷ್ಯಯ ಪಡೆಯುವುದು;

(ಡಿ) ಯಾವುದೇ ನ್ಯಾಯಾಲಯ ಅಥವಾ ಕಛೇರಿಯಿಂದ ಯಾವುದೇ ಸರ್ಕಾರಿ ದಾಖಲೆ ಅಥವಾ ಪ್ರತಿಯನ್ನು ಕಳುಹಿಸುವಂತೆ ಕೋರುವುದು;

(ಇ) ಸಾಕ್ಷ್ಯಗಳು ಮತ್ತು ದಸ್ತಾವೇಜುಗಳ ತಪಾಸಣೆಗಾಗಿ ಕಮೀಷನ್‌ಗಳನ್ನು ಹೊರಡಿಸುವುದು;

(ಎಫ್) ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟ ಪಡಿಸಬಹುದಾದಂಥ ಯಾವುದೇ ಇತರ ವಿಷಯ:

[1][ಪರಂತು, ಉಚ್ಚ ನ್ಯಾಯಾಲಯದ ಅಥವಾ ವಿಧಾನ ಮಂಡಲದ ಸದನಗಳ ಸಚಿವಾಲಯ ಸಿಬ್ಬಂದಿಯ ಅಧಿಕಾರಿಗಳ ಮತ್ತು ನೌಕರರ ವಿರುದ್ಧದ ಯಾವುದೇ ವಿಚಾರಣೆಯ ಸಂಬಂಧದಲ್ಲಿ ಈ ಉಪಪ್ರಕರಣದ ಮೇರೆಗಿನ ರಾಜ್ಯ ಸರ್ಕಾರವು ಚಲಾಯಿಸತಕ್ಕ ಅಧಿಕಾರಗಳನ್ನು ಅನುಕ್ರಮವಾಗಿ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಮತ್ತು ಸಂದರ್ಭಾನುಸಾರ ವಿಶೇಷ ಮಂಡಲಿಯು ಅಥವಾ ಮಂಡಲಿಯು ಚಲಾಯಿಸತಕ್ಕದ್ದು:][1]

1. 1991ರ ಅಧಿನಿಯಮ ಸಂಖ್ಯೆ 37ರ ಮೂಲಕ 10.12.1991 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][ಮತ್ತೂ ಪರಂತು,][1] ಉಚ್ಚ ನ್ಯಾಯಾಲಯದಿಂದ ಅಥವಾ ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಾಧೀಶರಿಂದ ಅಧಿಕೃತಗೊಂಡ ಯಾವುದೇ ಪ್ರಾಧಿಕಾರವು ಅಥವಾ ಅಧಿಕಾರಿಯು ನಡೆಸುವ ಯಾವುದೇ ವಿಚಾರಣೆಯ ಸಂಬಂಧದಲ್ಲಿ ಈ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಅಧಿಸೂಚನೆ ಮೂಲಕ ಸಂದರ್ಭಾನುಸಾರ ಉಚ್ಚನ್ಯಾಯಾಲಯವು ಅಥವಾ ಮುಖ್ಯ ನ್ಯಾಯಾಧೀಶರು ಅಂಥ ಪ್ರಾಧಿಕಾರಕ್ಕೆ ಅಥವಾ ಅಧಿಕಾರಿಗೆ ವಹಿಸಿಕೊಡಬಹುದು:

1. 1991ರ ಅಧಿನಿಯಮ ಸಂಖ್ಯೆ 37ರ, ಮೂಲಕ 10-12-1991 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][ಮತ್ತೂ ಪರಂತು,][1] (1) ನೇ ಉಪ-ಪ್ರಕರಣದಲ್ಲಿ ಏನೇ ಇದ್ದರೂ, ಅಧಿಕೃತಗೊಂಡ ವಿಚಾರಣಾ ಪ್ರಾಧಿಕಾರಿಯು, ಭಾರತದ ರಿಸರ್ವ್ ಬ್ಯಾಂಕನ್ನು, ಭಾರತದ ಸ್ಟೇಟ್ ಬ್ಯಾಂಕನ್ನು, ಭಾರತದ ಸ್ಟೇಟ್ ಬ್ಯಾಂಕ್ (ಅಧೀನ ಬ್ಯಾಂಕ್‌ಗಳು) ಅಧಿನಿಯಮ, 1959 (1958ರ ಕೇಂದ್ರ ಅಧಿನಿಯಮ 38)ರ 2ನೇ ಪ್ರಕರಣದ (ಕೆ) ಖಂಡದಲ್ಲಿ ಪರಿಭಾಷಿಸಿದಂತಹ ಯಾವುದೇ ಅಧೀನ ಬ್ಯಾಂಕನ್ನು ಅಥವಾ ಬ್ಯಾಂಕಿಂಗ್ ಕಂಪನಿಗಳ (ಉದ್ಯಮಗಳ ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1970(1970ರ ಕೇಂದ್ರ ಅಧಿನಿಯಮ 5)ರ ೩ನೇ ಪ್ರಕರಣದ ಮೇರೆಗೆ ರಚಿಸಲಾದ ಯಾವುದೇ ಸಂವಾದಿ ನೂತನ ಬ್ಯಾಂಕನ್ನು,-

1.1991ರ ಅಧಿನಿಯಮ ಸಂಖ್ಯೆ 37ರ ಮೂಲಕ 10.12.1991 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಎ) ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಸಂವಾದಿ ನೂತನ ಬ್ಯಾಂಕಿನ ಅಧೀನ ಬ್ಯಾಂಕು, ರಹಸ್ಯ ಸ್ವರೂಪದ್ದೆಂದು ಕ್ಲೇಮು ಮಾಡಿರುವ ಯಾವುದೇ ಲೆಕ್ಕ ಪತ್ರ ಪುಸ್ತಕಗಳನ್ನು ಅಥವಾ ಇತರ ದಸ್ತಾವೇಜುಗಳನ್ನು ಹಾಜರುಪಡಿಸಬೇಕೆಂದು, ಅಥವಾ

(ಬಿ) ಯಾವುದೇ ಅಂಥ ಪುಸ್ತಕಗಳನ್ನು ಅಥವಾ ದಸ್ತಾವೇಜುಗಳನ್ನು ಇಲಾಖಾ ವಿಚಾರಣೆಯ ವ್ಯವಹಾರಗಳ ದಾಖಲೆಯ ಒಂದು ಭಾಗವಾಗಿ ಮಾಡಬೇಕೆಂದು, ಅಥವಾ

(ಸಿ) ಯಾವುದೇ ಅಂಥ ಪುಸ್ತಕಗಳನ್ನು ಅಥವಾ ದಸ್ತಾವೇಜುಗಳನ್ನು ಸಲ್ಲಿಸಿದ್ದರೆ ಅವುಗಳನ್ನು ತನ್ನ ಮುಂದಿರುವ ಯಾವುದೇ ಪಕ್ಷಕಾರರಿಗೆ ಅಥವಾ ಯಾರೇ ಇತರ ವ್ಯಕ್ತಿಗೆ ತಪಾಸಣೆಗೆ ನೀಡಬೇಕೆಂದು,

-ಒತ್ತಾಯಪಡಿಸತಕ್ಕದ್ದಲ್ಲ.

(2) (ಎ) (1)ನೇ ಉಪ-ಪ್ರಕರಣದ ಮೇರೆಗೆ ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ವಹಿಸಿಕೊಡಲಾಗಿರುವ ಯಾವುದೇ ಪ್ರಾಧಿಕಾರವನ್ನು ಅಥವಾ ಯಾರೇ ಅಧಿಕಾರಿಯನ್ನು ಸಿವಿಲ್ ನ್ಯಾಯಾಲಯ ಎಂದು ಭಾವಿಸತಕ್ಕದ್ದು ಮತ್ತು ಭಾರತ ದಂಡ ಸಂಹಿತೆ, 1860ರ (1860ರ ಕೇಂದ್ರ ಅಧಿನಿಯಮ 45) 175ನೇ ಪ್ರಕರಣದಲ್ಲಿ, 178ನೇ ಪ್ರಕರಣದಲ್ಲಿ, 179ನೇ ಪ್ರಕರಣದಲ್ಲಿ, 180ನೇ ಪ್ರಕರಣದಲ್ಲಿ ಅಥವಾ 228ನೇ ಪ್ರಕರಣದಲ್ಲಿ ವಿವರಿಸಲಾದಂಥ ಯಾವುದೇ ಅಪರಾಧವನ್ನು ಸದರಿ ಪ್ರಾಧಿಕಾರಿಯ ಅಥವಾ ಅಧಿಕಾರಿಯ ಕಣ್ಣೆದುರು ಅಥವಾ ಸಮ್ಮುಖದಲ್ಲಿ ಮಾಡಲಾಗಿದ್ದರೆ, ಅಪರಾಧವಾಗುವಂತಹ ಸಂಗತಿಗಳನ್ನು ಮತ್ತು ದಂಡಪ್ರಕ್ರಿಯಾ ಸಂಹಿತೆ, 1973 (1974ರ ಕೇಂದ್ರ ಅಧಿನಿಯಮ 2)ರಲ್ಲಿ ಉಪಬಂಧಿಸಿದಂತೆ ಆರೋಪಿಯ ಹೇಳಿಕೆಯನ್ನು ದಾಖಲು ಮಾಡಿದ ನಂತರ ಮೊಕದ್ದಮೆಯನ್ನು, ಅದನ್ನು ವಿಚಾರಣೆ ನಡೆಸಲು ಅಧಿಕಾರವ್ಯಾಪ್ತಿಯನ್ನು ಹೊಂದಿರುವ ನ್ಯಾಯಾಧೀಶನಿಗೆ ಕಳುಹಿಸಿಕೊಡತಕ್ಕದ್ದು ಮತ್ತು ಅಂಥ ಪ್ರಕರಣವನ್ನು ಸ್ವೀಕರಿಸಿದ ಯಾರೇ ನ್ಯಾಯಾಧೀಶರು, ಮೊಕದ್ದಮೆಯನ್ನು ದಂಡ ಪ್ರಕ್ರಿಯಾ ಸಂಹಿತೆ, 1937ರ 246ನೇ ಪ್ರಕರಣದ ಮೇರೆಗೆ ತನಗೆ ಕಳುಹಿಸಲಾಗಿದ್ದರೆ ಹೇಗೋ ಹಾಗೆ ಆರೋಪಿಯ ವಿರುದ್ಧದ ದೂರಿನ ವಿಚಾರಣೆಯನ್ನು ಜರುಗಿಸತಕ್ಕದ್ದು.

(ಬಿ) ಸದರಿ ಪ್ರಾಧಿಕಾರದ ಅಥವಾ ಅಧಿಕಾರಿಯ ಮುಂದೆ ನಡೆಯುವ ಯಾವುದೇ ವ್ಯವಹರಣೆಯನ್ನು, ಭಾರತ ದಂಡ ಸಂಹಿತೆ, 1860ರ (1860ರ ಕೇಂದ್ರ ಅಧಿನಿಯಮ 45) 193ನೇ ಮತ್ತು 228ನೇ ಪ್ರಕರಣಗಳ ಅರ್ಥ ವ್ಯಾಪ್ತಿಯೊಳಗೆ ಒಂದು ನ್ಯಾಯಿಕ ವ್ಯವಹರಣೆ ಎಂದು ಭಾವಿಸತಕ್ಕದು.

(3) ಸರ್ಕಾರಿ ಸೇವೆಗಳ ಸದಸ್ಯನ ವಿರುದ್ಧದ ದುರ್ನಡತೆ ಅಥವಾ ಭ್ರಷ್ಟಾಚಾರಕ್ಕಾಗಿ ನಡೆದ ಯಾವುದೇ ಶಿಸ್ತು ವ್ಯವಹರಣೆಯಲ್ಲಿ ಅಂಥ ಸದಸ್ಯ ಅಥವಾ ಅವನ ಪರವಾಗಿ ಯಾರೇ ವ್ಯಕ್ತಿಯು, ಗೊತ್ತಿರುವ ಆದಾಯ ಮೂಲಕ್ಕೆ ಹೊಂದಿಕೆ ಆಗದಿರುವಂತಹ ಯಾವುದೇ ಹಣಕಾಸು ಸಂಪನ್ಮೂಲವನ್ನು ಅಥವಾ ಸ್ವತ್ತನ್ನು ಹೊಂದಿದ್ದಾನೆಂದು ಅಥವಾ ಅಂಥ ವ್ಯಕ್ತಿಯು ತನ್ನ ಅಧಿಕಾರಾವಧಿಯ ಯಾವುದೇ

ಕಾಲದಲ್ಲಿ ಅಂಥ ಸಂಪನ್ಮೂಲದ ಅಥವಾ ಸ್ವತ್ತಿನ ಸ್ವಾಧೀನ ಹೊಂದಿದ್ದು, ಆ ಬಗ್ಗೆ ಅಂಥ ವ್ಯಕ್ತಿಯು ತೃಪ್ತಿಕರವಾದ ಕಾರಣ ನೀಡಲಾಗಲಿಲ್ಲವೆಂದು ರುಜುವಾತಾದರೆ, ಆ ಆಧಾರದ ಮೇಲೆ, ಶಿಸ್ತು ಪ್ರಾಧಿಕಾರಿಯು ಅಥವಾ ವಿಚಾರಣಾ ಪ್ರಾಧಿಕಾರಿಯು ಯಾರಾದರೂ ಇದ್ದರೆ, ಅವರು, ಅಂಥ ನೌಕರನನ್ನು, ತದ್ವಿರುದ್ಧವಾಗಿ ಸಾಬೀತಾದ ಹೊರತು, ಅಂಥ ದುರ್ನಡತೆಯ ತಪ್ಪಿತಸ್ಥನೆಂದು ಭಾವಿಸತಕ್ಕದ್ದು.

**ವಿವರಣೆ**.- ಈ ಉಪ-ಪ್ರಕರಣದ ಉದ್ದೇಶಕ್ಕಾಗಿ `ಭ್ರಷ್ಟಾಚಾರ' ಎಂಬ ಪದವು [1][ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮ, 1988 (1988ರ ಕೇಂದ್ರ ಅಧಿನಿಯಮ 49)ರ 5ನೇ ಪ್ರಕರಣದ (1)ನೇ ಉಪ ಪ್ರಕರಣದಲ್ಲಿ][1] ``ಅಧಿಕೃತ ಕರ್ತವ್ಯ ನಿರ್ವಹಣೆಯಲ್ಲಿ ಆಪರಾಧಿಕ ದುರ್ನಡತೆ'' ಎಂಬ ಪದಗಳಿಗೆ ನೀಡಿರುವ ಅಥವಾ ಭಾರತದ ದಂಡ ಸಂಹಿತೆಯಲ್ಲಿ ಅನುಕ್ರಮವಾಗಿ 161 ಮತ್ತು 165ನೇ ಪ್ರಕರಣದಲ್ಲಿ ``ಅಧಿಕೃತ ಕೆಲಸಗಳ ಸಂಬಂಧದಲ್ಲಿ ಕಾನೂನು ಸಮ್ಮತ ಪರಿಶ್ರಮಧನವಲ್ಲದ ಇತರ ಸಂಭಾವನೆ ಪಡೆದುಕೊಳ್ಳುವುದು'' ಮತ್ತು ``ಕಾರಣವಿಲ್ಲದೇ ಮೌಲ್ಯವುಳ್ಳ ವಸ್ತುವನ್ನು ಪಡೆದುಕೊಳ್ಳುವುದು'' ಎಂಬ ಪದಗಳಿಗೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು.

1. 2010ರ ಅಧಿನಿಯಮ 200 ಮೂಲಕ 06.05.2010ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**6. ಇತರ ಕಾನೂನುಗಳಿಗಿಂತ ಈ ಅಧಿನಿಯಮವೇ ಹೆಚ್ಚು ಪರಿಣಾಮಕಾರಿಯಾಗಿರುವುದು**.- ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಲಾದ ಅಥವಾ ರಚಿಸಲಾಗಿದೆ ಎಂದು ಭಾವಿಸಲಾದ ಯಾವುದೇ ನಿಯಮವು, ಈ ಅಧಿನಿಯಮದಲ್ಲಿ ಯಾವ ವಿಷಯಗಳಿಗೆ ಉಪಬಂಧವನ್ನು ಕಲ್ಪಿಸಲಾಗಿದೆಯೋ ಅಥವಾ ಈ ಅಧಿನಿಯಮದ ಮೇರೆಗೆ ನಿಯಮಗಳನ್ನು ರಚಿಸಬಹುದಾಗಿದೆಯೋ ಅಂಥ ವಿಷಯಗಳಿಗೆ ಸಂಬಂಧಿಸಿದಂತೆ ಯಾವುದೇ ಇತರ ಕಾನೂನಿನಲ್ಲಿ ವಿರುದ್ಧವಾಗಿ ಏನೇ ಇದ್ದರೂ, ಪರಿಣಾಮಕಾರಿಯಾಗತಕ್ಕದ್ದು:

ಪರಂತು, ಈ ಅಧಿನಿಯಮದಲ್ಲಿ ಇರುವ ಯಾವುದೂ ಈ ಅಧಿನಿಯಮಕ್ಕೆ ಲಗತ್ತಿಸಲಾದ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ಅಧಿನಿಯಮಗಳ ಉಪಬಂಧಗಳನ್ನು ಭಾಧಿಸತಕ್ಕದ್ದಲ್ಲ ಅಥವಾ ಭಾಧಿಸುವುದೆಂದು ಭಾವಿಸತಕ್ಕದ್ದಲ್ಲ.

**7. ಕರ್ನಾಟಕ ಅಧಿನಿಯಮಗಳ ತಿದ್ದುಪಡಿ**.- [1][x x x][1] 1964ರ 22, 1966ರ 27, 1977ರ 14

[1][(1)x x x][1]

1. 1991ರ ಅಧಿನಿಯಮ ಸಂ. 37ರ ಮೂಲಕ 10-12-1991ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(2) ಕರ್ನಾಟಕ ಪೊಲೀಸ್ ಅಧಿನಿಯಮ, 1963 (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 4) ರಲ್ಲಿ,-

(ಎ) 5ನೇ ಪ್ರಕರಣದಲ್ಲಿ.-

(i) ``ಸಂವಿಧಾನದ 309ನೇ ಅನುಚ್ಛೇದದ ಮೇರೆಗೆ ರಚಿಸಲಾದ ಉಪಬಂಧಗಳ ಮತ್ತು''

ಎಂಬ ಪದಗಳನ್ನು ಮತ್ತು ಅಂಕಿಗಳನ್ನು ಬಿಟ್ಟು ಬಿಡತಕ್ಕದ್ದು,

(ii) (ಬಿ) ಖಂಡವನ್ನು ಮತ್ತು ಪರಂತುಕವನ್ನು ಬಿಟ್ಟುಬಿಡತಕ್ಕದ್ದು,

(ಬಿ) 23,24 ಮತ್ತು 25ನೇ ಪ್ರಕರಣಗಳನ್ನು ಬಿಟ್ಟುಬಿಡತಕ್ಕದ್ದು:

ಪರಂತು, ಪೊಲೀಸ್ ದಳದ ಸದಸ್ಯರ ನೇಮಕಾತಿಗೆ ಮತ್ತು ಸೇವಾ ಷರತ್ತುಗಳಿಗೆ ಸಂಬಂಧಿಸಿದ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳು ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು ಮತ್ತು 23.24 ಮತ್ತು 25ನೇ ಪ್ರಕರಣಗಳ ಉಪಬಂಧಗಳು ಸಹ ಈ ಅಧಿನಿಯಮಗಳ ಮೇರೆಗೆ ಅವುಗಳನ್ನು ರಚಿಸಲಾಗಿದ್ದರೆ ಹೇಗೋ ಹಾಗೆ ಶಿಸ್ತು ನಿಯಮಗಳ ಭಾಗವಾಗಿ ಮುಂದುವರಿಯತಕ್ಕದ್ದು.

(3) ಕರ್ನಾಟಕ ಪುರಸಭೆಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22)ರ 365ನೇ ಪ್ರಕರಣದ (2)ನೇ ಉಪ ಪ್ರಕರಣದಲ್ಲಿ, ``ಸಂವಿಧಾನದ 309ನೇ ಅನುಚ್ಛೇದದ ಮೇರೆಗೆ'' ಎಂಬ ಪದಗಳಿಗೆ ಬದಲಾಗಿ ``ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978ರ ಮೇರೆಗೆ'' ಎಂಬ ಪದಗಳನ್ನು ಮತ್ತು ಅಂಕಿಗಳನ್ನು ಸೇರಿಸತಕ್ಕದ್ದು.

(4) ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) ಅಧಿನಿಯಮ, 1956 (1956ರ ಕರ್ನಾಟಕ ಅಧಿನಿಯಮ 26)ರ ೫೯ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ, ``ಸಂವಿಧಾನದ 309ನೇ ಅನುಚ್ಛೇದದ ಮೇರೆಗೆ'' ಎಂಬ ಪದಗಳಿಗೆ ಬದಲಾಗಿ ``ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978ರ ಮೇರೆಗೆ'' ಎಂಬ ಪದಗಳನ್ನು ಮತ್ತು ಅಂಕಿಗಳನ್ನು ಸೇರಿಸತಕ್ಕದ್ದು.

(5) ಕರ್ನಾಟಕ ಪೌರ ನಿಗಮ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 4)ದಲ್ಲಿ 83ನೇ ಪ್ರಕರಣದ (3)ನೇ ಉಪ-ಪ್ರಕರಣದಲ್ಲಿ, ``ಭಾರತ ಸಂವಿಧಾನದ 309ನೇ ಅನುಚ್ಛೇಧದ

ಪರಂತುಕದ ಮೇರೆಗೆ ರಚಿಸಲಾದ ನಿಯಮಗಳ ಮೇರೆಗೆ'' ಎಂಬ ಪದಗಳು ಮತ್ತು ಅಂಕಿಗಳಿಗೆ ಬದಲಾಗಿ ``ಅವುಗಳಿಗೆ'' ಎಂಬ ಪದಗಳನ್ನು ಸೇರಿಸತಕ್ಕದ್ದು. 8. ನಿಯಮಗಳ ರಚನಾಧಿಕಾರ.- ರಾಜ್ಯ ಸರ್ಕಾರವು ಅಧಿಸೂಚನೆ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ಜಾರಿಗೊಳಿಸಲು ಯಮಗಳನ್ನು ರಚಿಸಬಹುದು.

**8. ನಿಯಮಗಳ ರಚನಾಧಿಕಾರ.-**(1) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸುವುದು.

(2) ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮವನ್ನು ಪೂರ್ವಾನ್ವಯವಾಗುವಂತೆ ರಚಿಸಬಹುದು ಮತ್ತು ಅಂಥ ನಿಯಮವನ್ನು ರಚಿಸಿದಾಗ, ನಿಯಮವನ್ನು ರಚಿಸಬೇಕಾಗಿ ಬಂದ ಕಾರಣಗಳನ್ನು ರಾಜ್ಯ ವಿಧಾನಮಂಡಲದ ಉಭಯಸದನಗಳ ಮುಂದೆ ಮಂಡಿಸಲಾಗುವ ವಿವರಣೆಯಲ್ಲಿ ನಿರ್ದಿಷ್ಟಪಡಿಸತಕ್ಕದ್ದು ಮತ್ತು (3)ನೇ ಉಪಕಪ್ರಕರಣದ ಮೇರೆಗೆ ಮಾಡಲಾದ ಯಾವುದೇ ಮಾರ್ಪಾಟಿಗೆ ಒಳಪಟ್ಟು ಈ ಅಧಿನಿಯಮದ ಮೇರೆಗೆ ರಚಿಸಲಾದ ಪ್ರತಿಯೊಂದು ನಿಯಮವು ಈ ಅಧಿನಿಯಮದಲ್ಲಿ ಅದನ್ನು ಅಧಿನಿಯಮಿಸಲಾಗಿದ್ದರೆ ಹೇಗೋ ಹಾಗೆ ಪರಿಣಾಮಕಾರಿಯಾಗಿರತಕ್ಕದ್ದು.

(3) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಮೂವತ್ತು ದಿವಸಗಳ ಒಟ್ಟು ಅವಧಿಗಾಗಿ ಇಡತಕ್ಕುದ್ದು ಮತ್ತು ಮೇಲೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನಗಳ ಮುಕ್ತಾಯಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸಕೂಡದೆಂದು ಎರಡೂ ಸದನಗಳೂ ಒಪ್ಪಿದರೆ, ಆ ನಿಯಮವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು, ಅಥವಾ ಪರಿಣಾಮಕಾರಿ ಯಾಗಿರತಕ್ಕದ್ದಲ್ಲ. ಆದಾಗ್ಯೂ, ಯಾವುದೇ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**9. ನಿರಸನ.**- [1][(1)][1] ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವ ಸಾರ್ವಜನಿಕ ನೌಕರರ ವಿಚಾರಣೆಗಳು) ಅಧಿನಿಯಮ, 1850 (1850ರ ಕೇಂದ್ರ ಅಧಿನಿಯಮ 37) ಮತ್ತು ಗುಲ್ಬರ್ಗಾ ಪ್ರದೇಶದಲ್ಲಿ ಜಾರಿಯಲ್ಲಿರುವ ಹೈದರಾಬಾದ್ ಸಾರ್ವಜನಿಕ ನೌಕರರ (ವಿಚಾರಣೆಗಳ ನಾಯಾಧೀಕರಣ) ಅಧಿನಿಯಮ, 1950(1950ರ ಹೈದರಾಬಾದ್ ಅಧಿನಿಯಮ XXIII)

-ಇವುಗಳನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

1. 1991ರ ಅಧಿನಿಯಮ ಸಂ. 37ರ (ಪ್ರ.7)ರ ಮೂಲಕ 10-12-1991ರಿಂದ ಜಾರಿಗೆ ಬರುವಂತೆ ಉಪ ಪ್ರಕರಣ(1) ಎಂಬುದಾಗಿ ಮರು ಸಂಖ್ಯೆ ನೀಡಲಾಗಿದೆ.

[1][(2) ಹಾಗೆ ನಿರಸನವಾಗಿದ್ದರೂ, ನಿರಸನಗೊಳಿಸಲಾದ ಅಧಿನಿಯಮಗಳ ಮೇರೆಗೆ ಮಾಡಲಾದ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮಗಳನ್ನು ಈ ಅಧಿನಿಯಮದ ಮೇರೆಗೆ ಮಾಡಲಾದುದು ಅಥವಾ ಕೈಗೊಳ್ಳಲಾದುದು ಎಂದು ಭಾವಿಸತಕ್ಕದ್ದು.][1]

1. 1991ರ ಅಧಿನಿಯಮ ಸಂ. 37ರ (ಪ್ರ.8)ರ ಮೂಲಕ 10-12-1991ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

## [1][`` ಅನುಸೂಚಿ ''

(6ನೇ ಪ್ರಕರಣ ನೋಡಿ)

1. ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ವರ್ಗ-IIIಹುದ್ದೆಗಳ (ನೇಮಕಾತಿ ಮಾನ್ಯೀಕರಣ) ಅಧಿನಿಯಮ, 1965.
2. ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಮುಷ್ಕರಗಳ ಪ್ರತಿಬಂಧ) ಅಧಿನಿಯಮ, 1966.
3. ಕರ್ನಾಟಕ ಸಿವಿಲ್ ಸೇವೆಗಳ (ವೇತನ, ಪದೋನ್ನತಿ ಮತ್ತು ನಿವೃತ್ತಿ ವೇತನಗಳ ವಿನಿಯಮನ) ಅಧಿನಿಯಮ, 1973
4. ಕರ್ನಾಟಕ ರಾಜ್ಯ ನೌಕರರ (ವಯೋ ನಿರ್ಧರಣೆ) ಅಧಿನಿಯಮ, 1974
5. ಕರ್ನಾಟಕ ಸೇವಾ ಪರೀಕ್ಷೆ ಅಧಿನಿಯಮ, 1976.
6. ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984][1]

1.1991ರ ಅಧಿನಿಯಮ ಸಂ. 37ರ (ಪ್ರ.8)ರ ಮಾಲಕ 10.12.1991ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978ನ್ನು (1990ರ 14) ಈ ಮುಂದಿನ ಅಧಿನಿಯಮಗಳ ಮೂಲಕ ತಿದ್ದುಪಡಿ ಮಾಡಲಾಗಿದೆ ಎಂದರೆ,-

## ತಿದ್ದುಪಡಿಗಳು ( ಕಾಲಾನುಕ್ರಮವಾಗಿ)

| ಕ್ರಮ ಸಂಖ್ಯೆ | ಅಧಿನಿಯಮದ ವರ್ಷ ಮತ್ತು ಸಂಖ್ಯೆ | ತಿದ್ದುಪಡಿಯಾದ ಪ್ರಕರಣಗಳು | ಷರಾ |
|---|---|---|---|
| 1. | 1990ರ 14 | --- | ಅಧಿಸೂಚನೆ ಸಂಖ್ಯೆ ಸಿಆಸುಇ 3 ಎಸ್ ಡಿಇ 92 ದಿನಾಂಕ 4.3.1992, 02.4.92 ರಿಂದ ಜಾರಿಗೆ ಬರುವಂತೆ |
| 2. | 1991ರ 37 | 1, 2(1), 2 (1ಎ), 2(4ಎ) 3(1), 3(2), 5(1), 7(1), 9(1), 9(2), ಅನುಸೂಚಿ | 10.12.1991ರಿಂದ ಜಾರಿಗೆ ಬರುವಂತೆ |

## ತಿದ್ದುಪಡಿಗಳು ( ಪ್ರಕರಣವಾರು)

| ಪ್ರಕರಣಗಳು | ಅಧಿನಿಯಮ ಸಂಖ್ಯೆ ಮತ್ತು ವರ್ಷ | ಷರಾ | ಪ್ರಕರಣಗಳು | ಅಧಿನಿಯಮ ಸಂಖ್ಯೆ ಮತ್ತು ವರ್ಷ | ಷರಾ |
|---|---|---|---|---|---|
| 1 | 1991ರ 37 | 10.12.1991ರಂದು ಜಾರಿ | 5 | 1991ರ37 | 10.12.1991ರಂದು ಜಾರಿಗೆ |
| 2 | 1991ರ 37 | 10.12.1991ರಂದು ಜಾರಿ | 7 | 1991ರ 37 | |
| 3 | 19914 37 | 10.12.1991ರಂದು ಜಾರಿ | 9 | 1991ರ 37 | |

## ಅಧಿಸೂಚನೆ

(1992ರ ಮಾರ್ಚ್ 4ನೇ ದಿನಾಂಕ ಬೆಂಗಳೂರು ( ಸಂ. ಡಿಪಿಎಆರ್ 3 ಎಸ್‌ಡಿಇ 92)

**ಎಸ್.ಓ. 463.-** ಕರ್ನಾಟಕ ಸಿವಿಲ್ ಸೇವೆಗಳ ಅಧಿನಿಯಮ, 1978 ಪ್ರಕರಣದಲ್ಲಿ ಪ್ರುದತ್ತವಾದ ಅಧಿಕಾರಿಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಕರ್ನಾಟಕ ಸರ್ಕಾರವು ಸಿವಿಲ್ ಸೇವೆಗಳ ಅಧಿನಿಯಮ, 1978ರ ಯಪ ಬಂಧಗಳನ್ನು 1992 ಏಪ್ರಿಲ್ ಎರಡನಢ ದಿನಾಂಕದಿಂದ ಜಾರಿಗೆ ಬರತಕ್ಕದ್ದು ಈ ಮೂಲಕ ಗೊತ್ತುಪಡಿಸಿದೆ.

ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಮೋತಿರಾಮ್ ಪವಾರ್
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ-2
(ಸೇವಾ ನಿಯಮಗಳು)

ಕರ್ನಾಟಕ ರಾಜ್ಯಪತ್ರ ಭಾಗ IV-2ಸಿ (ii) ದಿ 26.3.1992ರ ಪುಟ 376ರಲ್ಲಿ ಪ್ರಕಟಿಸಲಾಗಿದೆ)

*****